## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ 2020-21ನೇ ಸಾಲಿನ ಆರ್ಥಿಕ ವರ್ಷದ ಏಪ್ರಿಲ್ ಹಾಗೂ ಮೇ-2020ರ ಮಾಹೆಗಳ ಅವಧಿಗೆ ಗೌರವಧನವನ್ನು ಬಿಡುಗಡೆಗೊಳಿಸುವ ಕುರಿತು.

ಪ್ರಸ್ತಾವನೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 116 ಜಿಪಸ 2017, ದಿನಾಂಕ:03-05-2017.
2. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ:01-04-2020.
3. ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ) ಆರ್ಥಿಕ ಇಲಾಖೆ ಇವರ ಟಿಪ್ಪಣಿ ಸಂಖ್ಯೆ:128 ವೆಚ್ಚ 6/2020(ಇ-ಆಫೀಸ್) ದಿನಾಂಕ:20-04-2020.
4. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಗ್ರಾಅಪ 06 ಎಎಫ್‌ಎನ್ 2019 ದಿನಾಂಕ:27-04-2020.
5. ಸರ್ಕಾರದ ಆದೇಶ ಸಂಖ್ಯೆ:ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ:28-04-2020.

ಓದಲಾಗಿದೆ,

2017-18ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿರುವಂತೆ ಮೇಲೆ ಓದಲಾದ (1)ರ ಆದೇಶದಲ್ಲಿ ರಾಜ್ಯದ ಜಿಲ್ಲಾ/ತಾಲ್ಲೂಕು ಹಾಗೂ ಗ್ರಾಮ ಪಂಚಾಯತ್‌ನ ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡಂತೆ ಗೌರವಧನವನ್ನು ಪರಿಷ್ಕರಿಸಿದೆ.

(ರೂ.ಗಳಲ್ಲಿ)

| ಚುನಾಯಿತ ಸದಸ್ಯರು | ಗ್ರಾಮ ಪಂಚಾಯತಿ | ತಾಲ್ಲೂಕು ಪಂಚಾಯತಿ | ಜಿಲ್ಲಾ ಪಂಚಾಯತಿ |
|---|---|---|---|
| ಅಧ್ಯಕ್ಷ | 3,000 | 6,000 | 35,000 |
| ಉಪಾಧ್ಯಕ್ಷ | 2,000 | 4,000 | 15,000 |
| ಸದಸ್ಯ | 1,000 | 3,000 | 5,000 |

ರಾಜ್ಯದ ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ 2020-21ನೇ ಆರ್ಥಿಕ ಸಾಲಿಗೆ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ರೂ.13820.00ಲಕ್ಷಗಳನ್ನು ಲೆಕ್ಕ ಶೀರ್ಷಿಕೆ:2515-00-103-0-98-324 (2515-00-198-1-11-300)(ಯೋಜನೇತರ)ರಡಿ ಬಜೆಟ್‌ನಲ್ಲಿ ಅನುದಾನವನ್ನು ಕಾಯ್ದಿರಿಸಿದ್ದು, ಅದರಲ್ಲಿ ಮೇಲೆ ಓದಲಾದ (2)ರ ಆದೇಶ ಹಾಗೂ (3)ರ ಆರ್ಥಿಕ ಇಲಾಖೆ ಟಿಪ್ಪಣಿಯಲ್ಲಿ ತಿಳಿಸಿರುವಂತೆ ಏಪ್ರಿಲ್ ಹಾಗೂ ಮೇ-2020ರ ಮಾಹೆಗಳಿಗೆ ಮಾತ್ರ ಅನ್ವಯಿಸುವಂತೆ ಗೌರವಧನವನ್ನು ಬಿಡುಗಡೆ ಮಾಡಲು ಉದ್ದೇಶಿಸಲಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪಂರಾ 203 ಜಿಪಸ 2020, ಬೆಂಗಳೂರು, ದಿನಾಂಕ:20-06-2020.**

ಮೇಲಿನ ಪ್ರಸ್ತಾವನೆಯಲ್ಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, 2020-21ನೇ ಸಾಲಿನ ಏಪ್ರಿಲ್ ಹಾಗೂ ಮೇ-2020ರ ಮಾಹೆಗಳಿಗೆ ಮಾತ್ರ ಅನ್ವಯಿಸುವಂತೆ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಲೆಕ್ಕ ಶೀರ್ಷಿಕೆ:2515-00-103-0-98-324(2515-00-198-1-11-300) (ಯೋಜನೇತರ)ರಡಿ ಲಭ್ಯವಿರುವ ಅನುದಾನದಲ್ಲಿ ರೂ.22,23,62,000/-(ಇಪ್ಪತ್ತೆರಡು ಕೋಟಿ ಇಪ್ಪತ್ಮೂರು ಲಕ್ಷದ ಅರವತ್ತೆರಡು ಸಾವಿರ ರೂಪಾಯಿಗಳು ಮಾತ್ರ)ಗಳನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳಿಗೆ ಬಿಡುಗಡೆಗೊಳಿಸಿರುವ ಮಾಸಿಕ ಗೌರವಧನದ ಜಿಲ್ಲಾವಾರು ಮೊತ್ತಗಳನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ನೀಡಿದೆ. ಜಿಲ್ಲಾವಾರು ಗೌರವಧನದ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಖಜಾನೆ-2ನ ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್-ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕೋಡ್)ಕೋಡ್‌ಗಳಿಗೆ ಖಜಾನೆ-2 ತಂತ್ರಾಂಶದ ಮೂಲಕ ಅಪ್‌ಲೋಡ್ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅನುಮತಿಸಿದೆ.

ಮಾಸಿಕ ಗೌರವಧನದ ಮೊತ್ತಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಪಾವತಿಸುವುದು.

1. ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ಆಯಾ ಜಿಲ್ಲೆಗಳ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಖಜಾನೆ-2ನ ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್) ಕೋಡ್‌ಗಳಿಗೆ ಅಪ್‌ಲೋಡ್ ಮಾಡಿರುವುದರಿಂದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಖಜಾನೆಯಿಂದ ತಮ್ಮ ಮೊತ್ತಗಳನ್ನು ಸೆಳೆಯುವುದು.

2. ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಗ್ರಾಮ ಪಂಚಾಯತಿ ಚುನಾಯಿತ ಪ್ರತಿನಿಧಿಗಳ ಸಂಖ್ಯೆಗಳನ್ನು ನಿಖರವಾಗಿ ಗಣನೆಗೆ ತೆಗೆದುಕೊಂಡು ಪ್ರತಿ ಗ್ರಾಮ ಪಂಚಾಯತಿ ನೀಡಬೇಕಾಗಿರುವ ಮೊತ್ತಗಳನ್ನು ಲೆಕ್ಕಹಾಕಿ ಅಂತಹ ಮೊತ್ತಗಳನ್ನು ಗ್ರಾಮ ಪಂಚಾಯತಿಗಳ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ವಿಧಾನದ ಮೂಲಕ ವರ್ಗಾಯಿಸಿ ಚುನಾಯಿತ ಪ್ರತಿನಿಧಿಗಳಿಗೆ ಮಾಸಿಕ ಗೌರವಧನಗಳನ್ನು ಪಾವತಿಸಲು ಸೂಚನೆಗಳನ್ನು ನೀಡುವುದು.

3. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಮೊತ್ತಗಳನ್ನು ಗ್ರಾಮ ಪಂಚಾಯತಿಗಳ ಚುನಾಯಿತ ಪ್ರತಿನಿಧಿಗಳಿಗೆ ಏಪ್ರಿಲ್ ಮತ್ತು ಮೇ-2020ರ ಮಾಹೆಗಳ ಗೌರವಧನವನ್ನು ಪಾವತಿಸಲು ಮಾತ್ರ ವಿನಿಯೋಗಿಸುವುದು. ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:128 ವೆಚ್ಚ 6/2020(ಇ-ಆಫೀಸ್) ದಿನಾಂಕ:20-04-2020.ರ ಹಾಗೂ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ:ಎಫ್‌ಡಿ 2 ಟಿಎಫ್‌ಪಿ 2020 ದಿನಾಂಕ:01-04-2020 ಮತ್ತು ಎಫ್‌ಡಿ 2 ಟಿಎಫ್‌ಪಿ 2020, ದಿನಾಂಕ:28-04-2020ರಲ್ಲಿ ಆಯಾ ಇಲಾಖಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿ.ಮಂಜೂರ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.

2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ (ಪಿ.ಬಿ.ನಂ.5398) ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ (ಪಿ.ಬಿ.ನಂ.5329) ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
5. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು
7. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
8. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
9. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ, ಬೆಂಗಳೂರು.
10. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
11. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
12. ಗಣಕ ಕೋಶ - ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
13. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
14. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಅನುಬಂಧ

ರಾಜ್ಯದ 6013 ಗ್ರಾಮ ಪಂಚಾಯತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳಿಗೆ
2020-21ನೇ ಆರ್ಥಿಕ ಸಾಲಿನ ಏಪ್ರಿಲ್ ಮತ್ತು ಮೇ-2020ರ ಮಾಹೆಗಳಿಗೆ ನೀಡಬೇಕಾಗಿರುವ ಗೌರವಧನದ ವಿವರಗಳು ಸರ್ಕಾರದ ಆದೇಶ ಸಂಖ್ಯೆ:
ಗ್ರಾಅಪಂರಾ 203 ಜಿಪಸ 2020, ಬೆಂಗಳೂರು, ದಿನಾಂಕ:20-06-2020

| ಕ್ರ ಸಂ. | ಜಿಲ್ಲೆಯ ಹೆಸರು | ಒಟ್ಟು ಗ್ರಾಮ ಪಂಚಾಯತಿಗಳ ಸಂಖ್ಯೆ | ಗ್ರಾಮ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆ | ಗ್ರಾಮ ಪಂಚಾಯತಿ ಉಪಾಧ್ಯಕ್ಷರುಗಳ ಸಂಖ್ಯೆ | ಗ್ರಾಮ ಪಂಚಾಯತಿ ಸದಸ್ಯರುಗಳ ಸಂಖ್ಯೆ | ಎರಡು ತಿಂಗಳ ಅವಧಿಗೆ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ*/ ಉಪಾಧ್ಯಕ್ಷರಿಗೆ**/ ಸದಸ್ಯರುಗಳಿಗೆ*** ನೀಡಬೇಕಾಗಿರುವ ಗೌರವಧನ |
|---|---|---|---|---|---|---|
| 1 | ಬೆಂಗಳೂರು ನಗರ | 93 | 93 | 93 | 2171 | 5272000 |
| 2 | ಬೆಂಗಳೂರು ಗ್ರಾಮಾಂತರ | 102 | 102 | 102 | 1652 | 4324000 |
| 3 | ರಾಮನಗರ | 127 | 127 | 127 | 1808 | 4682000 |
| 4 | ಕೋಲಾರ | 156 | 156 | 156 | 2478 | 6516000 |
| 5 | ಚಿಕ್ಕಬಳ್ಳಾಪುರ | 157 | 157 | 157 | 2236 | 5658000 |
| 6 | ತುಮಕೂರು | 330 | 330 | 330 | 4738 | 12776000 |
| 7 | ಚಿತ್ರದುರ್ಗ | 189 | 189 | 189 | 3057 | 7428000 |
| 8 | ದಾವಣಗೆರೆ | 196 | 196 | 196 | 2321 | 6602000 |
| 9 | ಶಿವಮೊಗ್ಗ | 271 | 271 | 271 | 2416 | 6474000 |
| 10 | ಮೈಸೂರು | 266 | 266 | 266 | 4189 | 11038000 |
| 11 | ಚಾಮರಾಜನಗರ | 130 | 130 | 130 | 1911 | 4900000 |
| 12 | ಹಾಸನ | 267 | 267 | 267 | 3226 | 9122000 |
| 13 | ಕೊಡಗು | 104 | 104 | 104 | 1052 | 3078000 |
| 14 | ಮಂಡ್ಯ | 233 | 233 | 233 | 3421 | 9172000 |
| 15 | ಚಿಕ್ಕಮಗಳೂರು | 227 | 227 | 227 | 1890 | 5246000 |
| 16 | ಉಡುಪಿ | 158 | 158 | 158 | 2161 | 5902000 |
| 17 | ದಕ್ಷಿಣ ಕನ್ನಡ | 229 | 229 | 228 | 2949 | 7368000 |
| 18 | ಬೆಳಗಾವಿ | 506 | 506 | 506 | 7725 | 20510000 |
| 19 | ವಿಜಯಪುರ | 213 | 213 | 213 | 3577 | 8564000 |
| 20 | ಬಾಗಲಕೋಟೆ | 198 | 198 | 198 | 2861 | 7702000 |
| 21 | ಧಾರವಾಡ | 144 | 144 | 144 | 1776 | 4686000 |
| 22 | ಗದಗ | 122 | 122 | 122 | 1525 | 4270000 |
| 23 | ಹಾವೇರಿ | 224 | 224 | 224 | 2750 | 6954000 |
| 24 | ಉತ್ತರ ಕನ್ನಡ | 231 | 231 | 231 | 2270 | 6850000 |
| 25 | ಬೀದರ್ | 185 | 185 | 185 | 2942 | 7182000 |
| 26 | ಬಳ್ಳಾರಿ | 237 | 235 | 235 | 3886 | 10122000 |
| 27 | ರಾಯಚೂರು | 179 | 179 | 179 | 3200 | 7674000 |
| 28 | ಕಲಬುರಗಿ | 263 | 259 | 259 | 3986 | 10562000 |
| 29 | ಯಾದಗಿರಿ | 123 | 123 | 123 | 2121 | 5292000 |
| 30 | ಕೊಪ್ಪಳ | 153 | 153 | 153 | 2453 | 6436000 |
| ಒಟ್ಟು | | 6013 | 6007 | 6006 | 84748 | 222362000.00 |

* ಗ್ರಾ.ಪಂ. ಅಧ್ಯಕ್ಷರಿಗೆ ಮಾಸಿಕ ಗೌರವಧನ ರೂ.3000.00; ** ಗ್ರಾ.ಪಂ. ಉಪಾಧ್ಯಕ್ಷರಿಗೆ ಮಾಸಿಕ ಗೌರವಧನ ರೂ.2000.00; *** ಗ್ರಾ.ಪಂ. ಸದಸ್ಯರಿಗೆ ಮಾಸಿಕ ಗೌರವಧನ ರೂ.1000

20/06/2020
(ಸಿ.ಮುಂಜೂರ್)

ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

5
20/6/2020